# ಸುದ್ದಿ ಸಂಚಯ

## ಬೇಲೂರು ಮಠದಲ್ಲಿ ನಡೆದ ಶ್ರೀಮಾತೆ ಶಾರದಾದೇವಿಯವರ ೧೫೦ನೇ ಜಯಂತಿ ಉತ್ಸವದ ಸಮಾರೋಪ ಸಮಾರಂಭದ ಒಂದು ವಿಹಂಗಮ ನೋಟ

ಪಶ್ಚಿಮ ಬಂಗಾಳದಲ್ಲಿರುವ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಪ್ರಧಾನ ಕೇಂದ್ರವಾದ ಬೇಲೂರು ಮಠದ ಸುತ್ತಲಿನ ಪರಿಸರ ಜನವರಿ ತಿಂಗಳ ಮೂರನೇ ತಾರೀಖಿನಂದು ಉಷಃಕಾಲ ವಿಶೇಷ ಸಡಗರ ಸಂಭ್ರಮಗಳಿಂದ ತುಂಬಿತ್ತು. ಕೇವಲ ಅನುಭವಗಮ್ಯ ವಾಗಿದ್ದ ಆನಂದದ ಸಂತೆಯೇ ಆ ಪವಿತ್ರ ಕ್ಷೇತ್ರದಲ್ಲಿತ್ತು ಎಂದರೆ ಅತಿಶಯೋಕ್ತಿಯಾಗಲಾರದು. ಅಂದು ಬೆಳಗಿನ ಜಾವ ೪.೩೦ ಘಂಟೆಗೆ ಶ್ರೀಗುರುಮಹಾರಾಜರ ಆರತಿಯ ನಂತರ ಶ್ರೀಮಾತೆಗೆ ಆರತಿಯಾಯಿತು. ಅನಂತರ ಎಲ್ಲಾ ಸಾಧುಗಳೂ ಭಾಗವಹಿಸಿದ್ದ ಶ್ರೀಮಾತೆಯ ದಿವ್ಯಸಂಕೀರ್ತನೆ ಮತ್ತು ನರ್ತನಗಳಿಂದ ಒಂದು ಅಲೌಕಿಕವಾದ ವಾತಾವರಣ ಸೃಷ್ಟಿಯಾಗಿತ್ತು. ದಿನವಿಡೀ ಈ ವಾತಾವರಣದಲ್ಲಿದ್ದ ಭಕ್ತಾದಿಗಳಿಗೆ ಮಧ್ಯಾಹ್ನದ ಪ್ರಸಾದದ ನಂತರ ಸಂಜೆ ಅಪೂರ್ವವಾದ ಕಾರ್ಯಕ್ರಮ ಕಾದಿತ್ತು. ಎಲ್ಲಾ ದೇವದೇವಿಯರು ಹೇಗೆ ಶ್ರೀಮಾತೆಯ ರೂಪಿನಲ್ಲಿ ಅವತರಿಸಿದರು ಎಂಬುದನ್ನು ಸ್ಥಳೀಯ ಬಾಲಕರು ಅಂದು ಸಂಜೆ ನೃತ್ಯರೂಪಕದಲ್ಲಿ ಬಹಳ ಸುಂದರವಾಗಿ ನಿರೂಪಿಸಿದರು.



ವೇದಿಕೆಯ ಮೇಲೆ ಶ್ರೀಮಾತೆಯವರ ಅಲಂಕೃತ ಚಿತ್ರ

ಶ್ರೀಮಾತೆಯ ಅನಂತ ಗುಣಗಳನ್ನು ಹಾಗೂ ಜೀವನದ ವಿವಿಧ ಭಾವಗಳನ್ನು ಪರಿಚಯಿಸುವ ಅನೇಕ ಗೋಷ್ಠಿಗಳನ್ನು ನಾಲ್ಕನೇ ತಾರೀಖಿನ ಪ್ರಾತಃಕಾಲ ಶ್ರೀಮತ್ ಸ್ವಾಮಿ ರಂಗನಾಥಾನಂದಜಿ ಉದ್ಘಾಟಿಸುತ್ತ "ಶ್ರೀಮಾತೆ ಡಕಾಯಿತ-ಸಾಧು, ಮ್ಲೇಚ್ಛ-ಉಚ್ಚ ಎಲ್ಲರನ್ನೂ ಸಮಾನವಾಗಿ ಕಂಡವರು. ಪ್ರತಿಯೊಬ್ಬರ ಅಭಿಪ್ರಾಯಗಳನ್ನೂ ತುಂಬು ಹೃದಯದಿಂದ ಸ್ವೀಕರಿಸಿದ ಅವರ ಬದುಕು ಗಣತಂತ್ರದ ಸಂದೇಶವನ್ನು ಲೋಕಕ್ಕೆ ನೀಡಿದೆ" ಎಂದು ತಿಳಿಸಿದರು. ಮಠ ಮತ್ತು ಮಿಷನ್ನಿನ ಉಪಾಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಗಹನಾನಂದಜಿ ಮಾತನಾಡುತ್ತ, ಸಂಘಜನನಿಯಾದ ಶ್ರೀಮಾತೆಯವರು, ಬೇಲೂರು ಮಠಕ್ಕೆ ಬಂದಾಗ ರಾಮಕೃಷ್ಣ ಮಿಷನ್ನಿನ ಸಾಧುಗಳ ಸೇವಾಕಾರ್ಯ



ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿಯವರಿಂದ ಅನುಗ್ರಹ ಭಾಷಣ. ಎಡದಿಂದ ಪೂಜ್ಯ ಸ್ವಾಮಿ ಗಹನಾನಂದಜಿ ಮತ್ತು ಸ್ವಾಮಿ ಸ್ಮರಣಾನಂದಜಿ.

ಸಮಾಜದ ಎಲ್ಲ ವರ್ಗದವರಿಗೂ ದೊರೆತು ಜನರ ಬದುಕು ಹಸನಾಗಲಿ ಎಂದು ಹರಸಿದ್ದನ್ನು ಸ್ಮರಿಸಿದರು.

ಮುಂದಿನ ಅಧಿವೇಶನದಲ್ಲಿ ರಾಮಕೃಷ್ಣ ಮಿಷನ್ನಿನ ಟ್ರಸ್ಟಿಗಳೂ ಹಾಗೂ ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್‌ನ ಕಾರ್ಯದರ್ಶಿಗಳೂ ಆದ ಸ್ವಾಮಿ ಪ್ರಭಾನಂದಜಿ ಹಾಗೂ ಡಾ. ಕೇದಾರ್‌ನಾಥ್, ಪ್ರೊ.ಶಂಕರಿಪ್ರಸಾದ್ ಬಸು ಮೊದಲಾದ ಗಣ್ಯರು 'ಎಲ್ಲರ ತಾಯಿಯಾಗಿ ಶ್ರೀಮಾತೆ', 'ಕರ್ಮಯೋಗಿ ಶ್ರೀಮಾತೆ' 'ಶ್ರೀಮಾತೆ ಹಾಗೂ ವಿವೇಕಾನಂದ' ಮುಂತಾದ ವಿಷಯಗಳ ಕುರಿತು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಉಪಾಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಆತ್ಮಸ್ಥಾನಂದಜಿ ಶ್ರೀಮಾತೆಯ ಪವಿತ್ರ ಜೀವನದ ಅನೇಕ ಪ್ರಸಂಗಗಳನ್ನು ಉದಾಹರಿಸುತ್ತ ಅವರು ಹೇಗೆ ಆದರ್ಶಪುತ್ರಿ, ಆದರ್ಶಪತ್ನಿ, ಆದರ್ಶ ಸೊಸೆ, ಆದರ್ಶತಾಯಿಯಾಗಿ, ಸ್ತ್ರೀತ್ವದ ಗಾಂಭೀರ್ಯ, ಘನತೆಗಳ ಸಾಕಾರಮೂರ್ತಿಯಾಗಿದ್ದರು ಎಂಬುದನ್ನು ತಿಳಿಸಿದರು.

ಶ್ರೀಮಾತೆಗೆ ಶರತ್ ಹಾಗೂ ಅಮ್‌ಜದ್‌ರಲ್ಲಿ ಭೇದವಿರಲಿಲ್ಲ. ಅವರು ಎಲ್ಲರಿಗೂ ತಮ್ಮ ಪ್ರೀತಿವಾತ್ಸಲ್ಯಗಳನ್ನು, ಪ್ರತಿಯಾಗಿ ಏನನ್ನೂ ಬಯಸದೆ ಹಂಚಿದರು. ಈ ಪ್ರಪಂಚದಲ್ಲಿ ಪರಕೀಯರು ಅಪರಿಚಿತರು ಯಾರೂ ಇಲ್ಲ, ಎಲ್ಲರೂ ನಮ್ಮವರೇ ಎಂಬ ತತ್ತ್ವವನ್ನು ಆಚರಣೆಯಲ್ಲಿ ತಂದು ತಮ್ಮ ವಿಶ್ವ ಮಾತೃತ್ವವನ್ನೂ ಸಮದರ್ಶಿತ್ವವನ್ನೂ ಪ್ರಕಟಪಡಿಸಿದರು ಎಂದು ಸ್ವಾಮಿ ಆತ್ಮಪ್ರಿಯಾನಂದರು ತಿಳಿಸಿದರು. ದಿವ್ಯವಾದ 'ಪರತ್ವ' ಹಾಗೂ ಮಾನವೀಯತೆಯ 'ಸೌಲಭ್ಯ' ಶ್ರೀಮಾತೆಯವರಲ್ಲಿ ಒಂದಾಗಿತ್ತು. ಶ್ರೀಮಾತೆಯಲ್ಲಿ ಮನೆಮಾಡಿದ್ದ ಅಸಾಮಾನ್ಯವಾದ




ಕಾರ್ಯಕ್ರಮಕ್ಕೆ ಹಾಕಿದ್ದ ಬೃಹತ್ ಚಪ್ಪರದ ಭವ್ಯ ಪ್ರವೇಶದ್ವಾರ

ಸರಳತೆಯಿಂದ ಅವರು ಎಲ್ಲರಿಗೂ ಹತ್ತಿರದವರಾಗಿ ಬಾಳಿದರು. ತೀವ್ರವಾದ ವೈರಾಗ್ಯ, ಸಹಿಷ್ಣುತೆ, ಮಮತೆ, ಕ್ಷಮೆ ಇತ್ಯಾದಿ ಗುಣೈಶ್ವರ್ಯಗಳಿಂದ ಶೋಭಿಸುತ್ತಿದ್ದ ಅವರು ಅವತಾರದ ಶಕ್ತಿಯಾಗಿದ್ದರು ಎಂದು ಶ್ರೀಮತಿ ರಾಜಲಕ್ಷ್ಮಿವರ್ಮ ಪ್ರತಿಪಾದಿಸಿದರು. ಶ್ರೀಮಾತೆಯ ಜೀವನದ ಅನೇಕ ಘಟನೆಗಳಲ್ಲಿ ಅವರ 'ದೈವತ್ವ' ನಿರೂಪಿತವಾದ ಬಗೆಯನ್ನು ಸ್ವಾಮಿ ದೇವರಾಜಾನಂದಜಿ ಮಹಾರಾಜ್ ವಿವರಿಸಿದರು.

ಸಮಾರಂಭದ ಮೂರನೇ ದಿನವಾದ ಜನವರಿ ಐದರಂದು ಬೇಲೂರು ಮಠದ ವೇದವಿದ್ಯಾಲಯದ ಮಕ್ಕಳ ಸುಶ್ರಾವ್ಯವಾದ ವೇದಘೋಷದೊಡನೆ ಸ್ವಾಮಿ ಅಸಕ್ತಾನಂದರ ಅಧ್ಯಕ್ಷತೆಯಲ್ಲಿ ಅಧಿವೇಶನ ಆರಂಭವಾಯಿತು. ಶಕ್ತಿಸ್ವರೂಪಿಣಿ ಶ್ರೀಮಾತೆ, ಶ್ರೀಮಾತೆಯಲ್ಲಿ ಗೃಹಸ್ಥ ಮತ್ತುಸಂನ್ಯಾಸ ಧರ್ಮಗಳ ಆದರ್ಶ, ಶ್ರೀರಾಮಕೃಷ್ಣ ಮತ್ತು ಶ್ರೀಮಾತೆಯಲ್ಲಿ ಕಂಡುಬರುವ ವೈಶಿಷ್ಟ್ಯಗಳು, ಶ್ರೀಮಾತೆಯಲ್ಲಿ ಸಾಕಾರಗೊಂಡ ನಾಲ್ಕು ಯೋಗಗಳ ಸಮನ್ವಯ, 'ಎಲ್ಲವೂ ಬ್ರಹ್ಮವೇ' ಎಂಬ ವೇದಾಂತದ ಅತ್ಯುನ್ನತ ಆದರ್ಶ ಶ್ರೀಮಾತೆಯ ಬದುಕಿನಲ್ಲಿ ಸಾಕಾರಗೊಂಡ ಬಗೆ—ಮುಂತಾದ ವಿಷಯಗಳ ಕುರಿತು ವಿಚಾರ ಸಂಕಿರಣಗಳು ನಡೆದವು.

ಶ್ರೀಮಾತೆಗೆ ಇದ್ದ ಜೀವಗಳ ಮೇಲಿನ ಪ್ರೇಮ ಒಂದು ಕಡೆ ಆದರೆ ಜಡ ವಸ್ತುಗಳಾದ ಬುಟ್ಟಿ, ಕಸಪೊರಕೆ, ಕಡ್ಡಿ, ಸಿಪ್ಪೆ ಈ ಎಲ್ಲವುಗಳಲ್ಲಿ ತೋರಿದ ಪೂಜ್ಯಭಾವ, ದೇವಿಯೆ ಅನಂತಕೋಟಿ ರೂಪ ತಳೆದು ವಿಶ್ವವಾಗಿ ಮೆರೆದ ಬಗೆಯನ್ನು ಸ್ಪಷ್ಟಪಡಿಸುತ್ತದೆ ಎಂದು ಸ್ವಾಮಿ ಹರ್ಷಾನಂದಜಿ ತಿಳಿಸಿದರು. ನಂತರ ಸ್ವಾಮಿ ಆತ್ಮಾರಾಮಾನಂದಜಿ ಹಾಗೂ ನಿಖಿಲಾತ್ಮಾನಂದಜಿ ಮಾತನಾಡಿದರು. **ಜಾತಿದೇಶಕಾಲ ಸಮಯಾನವಚ್ಛಿನ್ನಾಃ ಸಾರ್ವಭೌಮಾಃ ಮಹಾವ್ರತಂ॥** ಎಂಬ ಪತಂಜಲಿಯ ಸೂತ್ರದ ಪರಿಪೂರ್ಣ ಸಾಕಾರ ಮೂರ್ತಿ ಶ್ರೀಮಾತೆ ಎಂಬುದನ್ನೂ, ನಿಃಸ್ವಾರ್ಥತೆಯ ಕೃಷ್ಣ, ಭಕ್ತವತ್ಸಲ ರಾಮ, ಅಸೀಮ ಕರುಣಾಮಯಿ ಬುದ್ಧ, ಮಹಾ ಅಹಿಂಸಾವ್ರತಧಾರಿ ಜಿನ ಈ ಎಲ್ಲರ ಸಮನ್ವಯ ರೂಪಿಯಾದ ಶ್ರೀರಾಮಕೃಷ್ಣರ ಶಕ್ತಿಯಾಗಿ ವಿರಾಜಿಸಿದ ಶ್ರೀಮಾತೆಯ ಅನುಪಮ ಆದರ್ಶವನ್ನೂ ಅನೇಕ ಉದಾಹರಣೆಗಳಿಂದ ಮನದಟ್ಟು ಮಾಡಿಕೊಟ್ಟರು. ಶ್ರೀಮಾತೆ ಇಷ್ಟ, ಗುರು ಇವುಗಳ ಸಂಗಮವಾಗಿದ್ದರು ಎಂದು ಮಠ ಮತ್ತು ಮಿಷನ್ನಿನ ಉಪಾಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಗೀತಾನಂದಜಿ ತಿಳಿಸಿಕೊಟ್ಟರು.

ಮರುದಿನದ ಸಂಪೂರ್ಣ ಕಾರ್ಯಕ್ರಮವನ್ನು ಶಾರದಾ ಮಠದ ಸಂನ್ಯಾಸಿನಿಯರು ನಡೆಸಿಕೊಟ್ಟರು. ಮಧುರವೂ ಭಾವಪೂರ್ಣವೂ ಏಕಾತ್ಮಬೋಧಕವೂ ಆದ ನಿವೇದಿತಾ ಶಾಲೆಯ ಮಕ್ಕಳ ಪ್ರಾರ್ಥನೆ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವನ್ನೂ ಪರಿಪೂರ್ಣತೆಯನ್ನೂ ಪ್ರತಿಬಿಂಬಿಸುವಂತಿತ್ತು. ಮಮತಾಮಯಿಯೂ ಜ್ಞಾನದಾಯಿನಿಯೂ ಆದ ಶ್ರೀಮಾತೆ, ಪ್ರತಿಯೊಬ್ಬ ತಾಯಿಯೂ ಪವಿತ್ರಳು ಪೂಜಾರ್ಹಳು ಎಂದು ನೀಡಿದ ಸಂದೇಶವನ್ನು ಬಾರ್ಬರಾ ಫೈನರ್ ಎಂಬ ಭಕ್ತೆ ಸ್ಪಷ್ಟಪಡಿಸಿದರು. ಮಾತನಾಡಿದ ಎಲ್ಲರೂ ಶ್ರೀಮಾತೆಯವರಲ್ಲಿ ತಮಗೆ ಅತ್ಯಂತ ಆತ್ಮೀಯವೆನಿಸಿದ, ಮೆಚ್ಚುಗೆಯೆನಿಸಿದ ಅಂಶಗಳನ್ನು ಉದಾಹರಣೆಗಳಿಂದ ನಿರೂಪಿಸಿದರು.



ಬೇಲೂರು ಮಠದ ಅಂಗಣದಲ್ಲಿ ನೆರೆದಿರುವ ಭಕ್ತಸಮುದಾಯ

ಸಂನ್ಯಾಸಿಯ ಕರ್ತವ್ಯ ಬಲಿದಾನ ತ್ಯಾಗ ಅಷ್ಟೇ ಅಲ್ಲ, ಎಲ್ಲ ಜೀವಿಗಳಿಗೆ ಅಭಯದಾನ ಎಂದು ತಿಳಿಸಿದ ಸ್ವಾಮಿ ಗೋಕುಲಾನಂದಜೀ ನೆರೆದಿರುವ ಎಲ್ಲರ ಮೇಲೂ ಶ್ರೀಮಾತೆಯವರು ತಮ್ಮ ಆಶೀರ್ವಾದವನ್ನು ವರ್ಷಿಸಲಿ ಎಂಬ ಪ್ರಾರ್ಥನೆಯನ್ನು ಸಲ್ಲಿಸಿದರು.

ಶ್ರೀಮಾತೆಯ ಅಪೂರ್ವವಾದ ಬದುಕು ಸಂದೇಶಗಳ ಅನೇಕ ಮಜಲುಗಳನ್ನು ಮನಮುಟ್ಟುವಂತೆ ಪ್ರಸ್ತುತಪಡಿಸಿದ ಅಪೂರ್ವ ಕಾರ್ಯಕ್ರಮ ಇದಾಗಿತ್ತು. ಅವರ ಬಗೆಗಿನ ವಿಚಾರಗಳನ್ನು ಕೇಳುತ್ತ ಕೇಳುತ್ತ ಕೇಳುಗರ ಮೈಮನಗಳಲ್ಲಿ ಶ್ರೀಮಾತೆಯವರೇ ತುಂಬಿಹೋಗಿದ್ದರು ಎನ್ನಬೇಕು. ಇಂತಹ ಮರೆಯಲಾಗದ ಅದ್ಭುತ ಅನುಭವವನ್ನು, ಎಣೆಯಿಲ್ಲದ ಆನಂದವನ್ನು ತಂದುಕೊಟ್ಟ ಸಮಾವೇಶದ ಆಯೋಜಕರಿಗೆ ನಮನಗಳು.

**—ಡಾ. ಪ್ರಸನ್ನಾಕ್ಷಿ ಕೆ.ಎಲ್., ಮೈಸೂರು**